# ನನ್ನೊಳಗಿನ ಸೆಳೆತ ನಟನೆ

## ಸ್ವಾತಿ ಶರ್ಮ

ಕಲರ್ಸ್ ಕನ್ನಡದ 'ಮನೆದೇವ್ರು' ಸಾನ್ವಿ



★ *ನೀವು ತುಂಬಾ ಕಿತಾಪತಿ ಮಾಡುತ್ತೀರಾ?*
ವೈಯಕ್ತಿಕ ಅಲ್ಲದಿದ್ದರೂ ಪಾತ್ರದಲ್ಲಿ ಮಾತ್ರ ಹೌದು. ಅದು ತುಂಬಾ ಒಳ್ಳೆಯ ಪಾತ್ರ. ಕಥೆಯಲ್ಲಿ ಎರಡನೇ ನಾಯಕಿ ಸ್ಥಾನವಿದೆ. ಕುಟುಂಬದ ಎಲ್ಲಾ ವ್ಯವಹಾರದಲ್ಲಿ ತಲೆ ಹಾಕುವುದು, ಕಿರಿ ಕಿರಿ ಮಾಡುವುದು ಅದರ ಸ್ವಭಾವ. ಆ ಮೂಲಕ ಮನೆ ಮಂದಿಯ ಹತ್ತಿರ ಬೈಯಿಸಿಕೊಳ್ಳುವುದನ್ನು ನಾನು ಎಂಜಾಯ್ ಮಾಡುತ್ತಿದ್ದೇನೆ. ಹಾಗಾಗಿ ಅಲ್ಲಿ ಬೈಯುವುದೇನೂ ಕಿರಿಕಿರಿ ಅನ್ನಿಸುವುದಿಲ್ಲ.

★ *ಬಣ್ಣ ಯಾವಾಗ ಹಚ್ಚಿದ್ದು?*
'ಓಂ ಶಕ್ತಿ ಓಂ ಶಾಂತಿ'ಯಲ್ಲಿ ಅತಿಥಿ ಪಾತ್ರದಲ್ಲಿ ಒಂದೆರಡು ಕಂತು ಕಾಣಿಸಿಕೊಂಡಿದ್ದೆ. ಹಾಗೆ ನೋಡಿದರೆ ಇದೇ ಮೊದಲ ಧಾರಾವಾಹಿ. ಪ್ರಮುಖ ಪಾತ್ರ ಕೂಡ. ಇದಾದ ಮೇಲೆ 'ಕನ್ನಡಕ್ಕಾಗಿ ಒಂದು ಒತ್ತು' ಸಿನಿಮಾದಲ್ಲಿ ಮಾಡಿದ್ದೇನೆ. 'ಎಡಕಲ್ಲು ಗುಡ್ಡದ ಮೇಲೆ' ಎಂಬ ಹಾಸ್ಯಭರಿತ ಹೊಸ ಸಿನಿಮಾ ಅರ್ಧದಷ್ಟು ಮುಗಿದಿದೆ. ಅದರಲ್ಲಿ ನಾಯಕಿಯ ಪಾತ್ರವನ್ನು ನಿರ್ವಹಿಸಿದ್ದೇನೆ.
ನನಗೆ ಮೊದಲಿನಿಂದಲೂ ನಟನೆಯ ಬಗ್ಗೆ ಸಣ್ಣ ಸೆಳೆತ ಇತ್ತು. ಅದು 'ಓಂ ಶಕ್ತಿ..' ಮೂಲಕ ಈಡೇರಿತು ಎಂದು ಅಂದುಕೊಳ್ಳುತ್ತೇನೆ. ಆನಂತರ ಅದೇ ವೃತ್ತಿಯಾಗಿ ತೆಗೆದುಕೊಂಡಿದ್ದೇನೆ. ಇಲ್ಲದಿದ್ದರೆ ನಾನು ಯಾವುದಾದರೂ ಬ್ಯಾಂಕ್‌ನಲ್ಲಿ ಉದ್ಯೋಗ ಪಡೆಯುತ್ತಿದ್ದೆ ಅಂತ ಅನ್ನಿಸುತ್ತದೆ. ದೊಡ್ಡ ದೊಡ್ಡ ಕನಸುಗಳನ್ನು ನಾನು ಎಂದೂ ಹೆಣೆದುಕೊಂಡಿರಲಿಲ್ಲ. ಬಿಕಾಂ ಓದುವ ಮುನ್ನವೇ ಬ್ಯಾಂಕ್ ಪರೀಕ್ಷೆ ತೆಗೆದುಕೊಳ್ಳಬೇಕು ಎಂದು ನಿರ್ಧರಿಸಿದ್ದೆ. ಅಷ್ಟರಲ್ಲಿ ಆಕಸ್ಮಿಕ ಎನ್ನುವಂತೆ ನನ್ನ ಉದ್ದೇಶ ತಿರುವು ಪಡೆಯಿತು. ಈಗ ನಟಿ ಅಷ್ಟೆ.

★ *ನಟನೆಗೆ ಮನ ಸೆಳೆಯಲು ಏನು ಕಾರಣ?*
ಯಾವುದೇ ಅಭಿಪ್ರಾಯವನ್ನು ಹೇಳುವಾಗ ನಾನು ಮಾತಿನ ಜೊತೆ ದೇಹ ಭಾಷೆಯನ್ನೂ ಬಳಸುತ್ತಿದ್ದೆ. ಅದು ಚಿಕ್ಕ ವಯಸ್ಸಿನಿಂದಲೂ ನನಗೆ ಇದ್ದ ಅಭ್ಯಾಸ. ಅದಕ್ಕೆ ನಮ್ಮ ಮನೆಯಲ್ಲಿ ಎಲ್ಲಾ ನಾಟಕ ಮಾಡುತ್ತಾಳೆ ಎಂದು ರೇಗಿಸುತ್ತಿದ್ದರು. ಕೆಲವೊಮ್ಮೆ ಅಭಿನಯಕ್ಕೆ ಹೇಳಿ ಮಾಡಿಸಿದಂತೆ ಇದ್ದೀಯಾ ಎಂದು ಹೊಗಳುತ್ತಿದ್ದರು. ಇದು ನನಗೂ ನಟನೆಯ ಬಗ್ಗೆ ಆಸೆ ಮೂಡಿಸಿದ್ದು ಸುಳ್ಳಲ್ಲ. ಆದರೂ ಒಂದೇ ಒಂದು ನಾಟಕದಲ್ಲಿಯೂ ಆ ಪಯತ್ನ ಮಾಡಲಿಲ್ಲ. ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಬಿಕಾಂ ಓದುವಾಗ ಫ್ಯಾಷನ್ ಶೋ ನೀಡಲು ಆರಂಭಿಸಿದೆ. ಅದರಲ್ಲಿ ಫೋಟೋಜೆನಿಕ್ ಎಂಬ ಕಾರಣಕ್ಕೆ ನನಗೆ ಬಹುಮಾನ ಸಿಕ್ಕಿತು. ಅದು ನಟಿಯಾಗಲು ಮತ್ತಷ್ಟು ಉದ್ದೀಪನಗೊಳಿಸಿತು. ಕ್ರಮೇಣ ನಟನೆ ಬಗ್ಗೆ ಸ್ವಲ್ಪ ಸ್ವಲ್ಪ ತಿಳಿಯಲು ಆರಂಭಿಸಿದೆ.

★ *ನಟಿಯಾಗಿ ನಿಮಗೆ ಯಾರು ಆದರ್ಶ?*
ಚಿಕ್ಕ ವಯಸ್ಸಿನಿಂದಲೂ ನನಗೆ ನಟಿ ಸೌಂದರ್ಯ ತುಂಬಾ ಇಷ್ಟ. ನನಗೆ ಅಳುವುದಕ್ಕೆ ಬರುವುದಿಲ್ಲ. ಅಳುವ ಸಂದರ್ಭವನ್ನು ನಾನು ಅಭ್ಯಾಸ ಮಾಡುತ್ತೇನೆ. ಸಮಯ ಸಿಕ್ಕಾಗೆಲ್ಲ ಸೌಂದರ್ಯ ಅಭಿನಯದ ಚಿತ್ರದ ತುಣುಕುಗಳನ್ನು ಮನೆಯಲ್ಲಿ ವೀಕ್ಷಿಸುತ್ತೇನೆ. ಹಾಗೆಂದು ಎಂದೂ ಯಾರ ಅಭಿನಯವನ್ನು ಅನುಕರಿಸಬೇಕು ಎನ್ನುವ ಬಯಕೆ ಇಲ್ಲ. ಅವರಂತೆ ಕಾಣಬೇಕು ಎನ್ನುವ ಗೀಳೂ ಇಲ್ಲ. ಆದರೆ ಸೌಂದರ್ಯ ಅವರ ನಟನೆ ತುಂಬಾ ಇಷ್ಟ ಆಗುತ್ತದೆ. ಅವರಿಂದ ನಟನೆಯ ಮೂಲ ಪಾಠವನ್ನು ಕಲಿಯಬಹುದು ಎಂದು ನಾನು ಭಾವಿಸಿದ್ದೇನೆ. ನಮಗೆ ಇಷ್ಟ ಆಗುವವರನ್ನು ನೋಡುವುದು ಕೂಡ ಖುಷಿ ಕೊಡುತ್ತದೆ.

★ *ನಟನಾ ಲೋಕ ಹೇಗೆನಿಸುತ್ತದೆ?*
ನನಗೆ ಇಷ್ಟ ಇರುವ ಕೆಲಸ ಮಾಡುತ್ತಿದ್ದೇನೆ. ಇದನ್ನು ನಾನು ಪ್ರತಿಕ್ಷಣ ಅನುಭವಿಸುತ್ತಿದ್ದೇನೆ. ಕೆಲವೊಮ್ಮ ಮಾತ್ರ ಒತ್ತಡ ಅನ್ನಿಸುತ್ತದೆ. ಅದಕ್ಕೆ ದೈಹಿಕ ಆರೋಗ್ಯ ಇಲ್ಲವೇ ಮಾನಸಿಕ ತೊಳಲಾಟ ಕಾರಣ ಆಗಬಹುದೇ ಹೊರತು ಉತ್ಸಾಹ ಮಾತ್ರ ಕುಂದುವುದಿಲ್ಲ. ದೇಹ ಹುಷಾರಿಲ್ಲದೆ ಬಳಲುವಾಗ ಬೇಗ ಮುಗಿದರೆ ಸಾಕು ಅನ್ನಿಸುತ್ತದೆ. ಆದರೆ ಕಂತು ಕಡಿಮೆಯಾಗಿದ್ದರೂ ದೀರ್ಘಕಾಲ ಶೂಟಿಂಗ್‌ನಲ್ಲಿ ತೊಡಗಬೇಕಾಗುತ್ತದೆ. ಆಗ ಮಾತ್ರ ಒಂದಿಷ್ಟು ಏನೋ ಅನ್ನಿಸುತ್ತದೆ. ಬಿಟ್ಟರೆ ಆರಾಮಾಗಿದ್ದೇನೆ.

★ *ಮತ್ತೇನು ಮಾಡುತ್ತೀರಿ?*
ನನ್ನ ಪಾಡಿಗೆ ನಾನು ಹಾಡುತ್ತೇನೆ. ಬಾಲ್ಯದಲ್ಲಿಯೇ ನಾನು ಶಾಸ್ತ್ರೀಯ ಸಂಗೀತ ಅಭ್ಯಾಸ ಮಾಡುತ್ತಿದ್ದೆ. ಕಾರಣಾಂತರದಿಂದ ಮುಂದುವರಿಸಲು ಸಾಧ್ಯ ಆಗಲಿಲ್ಲ. ಈಗ ತರಗತಿಗೆ ಸೇರಿದರೂ ಸಮಯ ಆಗುತ್ತಿಲ್ಲ. ಚೆನ್ನಾಗಿ ಹಾಡುತ್ತೇನೆ.

■ ರಾಗು